ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ರಾಯಚೂರಿನಲ್ಲಿರುವ RTPS ಮತ್ತು YTPS ನ ಶಾಖೋತ್ಪನ್ನಗಳ ಕುರಿತು

ಶ್ರೀ ಎನ್. ಎಸ್. ಭೋಸರಾಜು (ವಿಧಾನಸಭೆಯಿಂದ ಚುನಾಯಿತರಾದವರು):-

1275 (1533) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ (KPC) ವತಿಯಿಂದ ನಿರ್ಮಾಣ ಮಾಡಿರುವ RTPS ಹಾಗೂ YTPS ನಿಂದ ಉತ್ಪತ್ತಿಯಾಗುತ್ತಿರುವ ಒಟ್ಟು ವಿದ್ಯುತ್ತಿನ ಪ್ರಮಾಣ ಎಷ್ಟು; ಈ ಯೋಜನೆಗೆ ಭೂಸ್ವಾಧೀನ ಪಡೆದುಕೊಂಡಿರುವ ಭೂಮಿ ಎಷ್ಟು ;

(ಆ) ಈ ವಿದ್ಯುತ್ ಉತ್ಪಾದನೆಯಿಂದ ರಾಯಚೂರು ಭಾಗದಲ್ಲಿರುವ ರೈತರಿಗೆ ಸಿಕ್ಕಿರುವ ಸೌಲಭ್ಯಗಳೇನು ; ಹಾಗೂ ಸ್ಥಳೀಯರಿಗೆ ಸಿಕ್ಕಿರುವ ಉದ್ಯೋಗ ಎಷ್ಟು ; ಶಕ್ತಿ ನಗರದಲ್ಲಿ ಪರಿಸರವನ್ನು ಕಾಪಾಡÀಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ಹಾಗೂ ತುಂಗಭದ್ರಾ ನದಿಗಳು ಇರುವುದರಿಂದ ರೈತರ ಪಂಪ್‌ಸೆಟ್‌ಗಳಿಗೆ ದಿನದ 12 ತಾಸು ವಿದ್ಯುತ್ ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?